ವಿಶ್ವವಾಣಿ

ಸಂಪಾದಕೀಯ

ಆ್ಯಸಿಡ್ ದಾಳಿ ಇದೇ ಕೊನೆಯಾಗಲಿ

ಪ್ರೀತಿ ನಿರಾಕರಿಸಿದರೆಂಬ ಕಾರಣಕ್ಕೆ 24 ವರ್ಷದ ಯುವತಿ ಮೇಲೆ ಏಪ್ರಿಲ್ 28ರಂದು ಆ್ಯಸಿಡ್ ಎರಚಿ ಪರಾರಿಯಾಗಿದ್ದ ಆರೋಪಿ ನಾಗೇಶ್‌ನನ್ನು ಬೆಂಗಳೂರಿನ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ತಮಿಳುನಾಡಿನಲ್ಲಿ ಬಂಧಿಸಿದ್ದು ಶ್ಲಾಘನೀಯ. ಪ್ರೀತಿ, ಪ್ರೇಮ, ಕೌಟುಂಬಿಕ ಕಲಹಗಳಿಂದ ಈ ರೀತಿ ಆ್ಯಸಿಡ್ ದಾಳಿಗಳಾಗಿರುವುದು ಇದೇ ಮೊದಲಲ್ಲ. ಈ ಹಿಂದೆಯೂ ಅನೇಕ ಅಮಾಯಕ ಯುವತಿಯರು, ಮಹಿಳೆಯರು ಇಂತಹ ವಿಕೃತ ಕೃತ್ಯಕ್ಕೆ ಬಲಿಯಾಗಿದ್ದು, ಇಂದಿಗೂ ತಮ್ಮ ಜೀವನವನ್ನೇ ಕಣ್ಣೀರಿನ ಜತೆ ಕಳೆಯುತ್ತಿದ್ದಾರೆ. ಈ ನಾಗರಿಕ ಸಮಾಜದಲ್ಲಿ ಮಹಿಳೆಯರನ್ನು ರಕ್ಷಿಸಬೇಕಾದ ಪುರುಷರೇ ಮಹಿಳೆಯರ ಮೇಲೆ ಆ್ಯಸಿಡ್ ದಾಳಿ ನಡೆಸಿ ಅವರು ಜೀವನಪರ್ಯಂತ ನರಳುವಂತೆ ಮಾಡುತ್ತಿರುವುದು ದುರಂತ. ಒಬ್ಬಿಬ್ಬರು ಮಾಡುವ ಇಂತಹ ಕೃತ್ಯಗಳು ಇಡೀ ಪುರುಷ ಸಮುದಾಯವೇ ತಲೆ ತಗ್ಗಿಸುವಂತೆ ಮಾಡುತ್ತವೆ. ಆ್ಯಸಿಡ್ ದಾಳಿಗೆ ಒಳಗಾದ ಅನೇಕ ಮಹಿಳೆಯರು ಇಂದಿಗೂ ಸರಿಯಾದ ಉದ್ಯೋಗವಿಲ್ಲದೆ ಜೀವನ ನಿರ್ವಹಣೆಗೆ ಕಷ್ಟಪಡುವಂತಾಗಿದೆ. ಆದರೂ ತಮ್ಮ ನೋವು ನುಂಗಿಕೊಂಡು ಜೀವನ ನಡೆಸುತ್ತಿದ್ದಾರೆ. ನಾಗೇಶ್‌ನಂತಹ ವಿಕೃತ ಮನಸ್ಥಿತಿಯವರಿಗೆ ತಕ್ಕ ಶಿಕ್ಷೆಯಾಗಬೇಕು. ಕಠಿಣ ಶಿಕ್ಷೆಯಾಗುವಂತಹ ಕಾನೂನುಗಳನ್ನು ಜಾರಿಯಾಗಬೇಕಿದೆ. ಆ ಶಿಕ್ಷೆಯನ್ನು ನೋಡಿ ಮುಂದೆ ಯಾರೊಬ್ಬರೂ ಇಂತಹ ಕೃತ್ಯಕ್ಕೆ ಕೈ ಹಾಕಬಾರದು. ಆಗ ಮಾತ್ರ ಇಂತಹ ಆ್ಯಸಿಡ್ ದಾಳಿಗಳು ಕೊನೆಯಾಗಲಿವೆ. ಯಥಾಪ್ರಕಾರ ಎಲ್ಲ ಅಪರಾಧ ಪ್ರಕರಣಗಳಂತೆ ಆ್ಯಸಿಡ್ ದಾಳಿಯನ್ನು ಪರಿಗಣಿಸಿದರೆ, ಜಾಮೀನು ಪಡೆದು ಮತ್ತೆ ತಮ್ಮ ವಿಕೃತಿ ಮೆರೆಯುತ್ತಾರೆ ಮತ್ತು ಈ ಸಮಾಜದಲ್ಲಿ ಮಹಿಳೆಯರಿಗೆ ರಕ್ಷಣೆಯೇ ಇಲ್ಲದಂತಾಗುತ್ತದೆ. ಇನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆ್ಯಸಿಡ್ ದಾಳಿ ಸಂತ್ರಸ್ತರಿಗೆ ನೀಡುತ್ತಿದ್ದ ಮಾಸಿಕ ಪಿಂಚಣಿ ಮೊತ್ತವನ್ನು ₹3,000ದಿಂದ ₹10,000ಕ್ಕೆ ಹೆಚ್ಚಿಸಿದ್ದಾರೆ. ಅಲ್ಲದೆ, ಅವರಿಗೆ ನಿವೇಶನ, ಮನೆ ಮತ್ತು ಸ್ವಯಂ ಉದ್ಯೋಗಕ್ಕೆ 5 ಲಕ್ಷ ನೆರವು ನೀಡುವ ಬಗ್ಗೆ ಘೋಷಣೆ ಮಾಡಿರುವುದು ಸ್ವಾಗತಾರ್ಹ. ನೊಂದವರ ಜತೆ ಸರಕಾರ ಸದಾ ನಿಲ್ಲುತ್ತದೆ ಎಂದು ಪ್ರತಿ ವೇದಿಯಲ್ಲೂ ಹೇಳುತ್ತಿದ್ದ ಸಿಎಂ ಬೊಮ್ಮಾಯಿ ಅವರು ಆ್ಯಸಿಡ್ ಸಂತ್ರಸ್ತೆಯರ ನೆರವಿಗೆ ನಿಲ್ಲುವ ಮೂಲಕ ತಮ್ಮ ಮಾತು ಉಳಿಸಿಕೊಂಡಿದ್ದಾರೆ.

ಸೊಂಪಾದಕೀಯ

ಮಿನಿಷ್ಟ್ರಾಗೋ ಆಸೆ ಮರೆತು ಊರಿಗ್ ಹೊರಟು

ಮುಂದಿನ ಒಂದ್ ವರ್ಷಕ್ಕಾದ್ರೂ ಗೂಟದ ಕಾರಲ್ ಓಡಾಡ್ತೀವಿ ಅಂತ ಆಸೆ ಇಟ್ಕೊಂಡಿದ್ರೋರೆಲ್ಲ ಕಳೆದ ನಾಲ್ಕೈದು ದಿನಗಳಿಂದ ನಡೆಯುತ್ತಿರೋ ನಾಟಕಕ್ಕೆ ಬೇಸತ್ತು ತಮ್ಮ ಮಹದಾಸೆಯನ್ನು ಮರೆತುಬಿಟ್ಟಿದ್ದಾರಂತೆ. ನಾಲ್ಕು ವರ್ಷದಿಂದ ಅಧಿಕಾರದಲ್ಲಿದ್ದರೂ, ನಮಗೆ ಅಧಿಕಾರ ಅನುಭವಿಸುವ ಭಾಗ್ಯ ಲಭಿಸಿಲ್ಲ, ಈಗಲಾದರೂ ನಾವು ಗೂಟದ ಕಾರೇರಿ ಗುರಿತಲುಪಿದ ಖುಷಿಯಲ್ಲಿ ಕುಣಿದಾಡೋಣ ಎಂದುಕೊಂಡಿದ್ದರು ಕೆಲ ಶಾಸಕರು. ಆದರೇನ್ ಮಾಡೋದು ಅವರ ನಸೀಬು ಸರಿಯಾಗಿಲ್ಲ ಅನಿಸುತ್ತೆ. ಹೈಕಮಾಂಡ್ ಅನ್ನೋ ಮಾಯಾವಿ ಲೋಕ ಇವರಿಗೆ ಅಧಿಕಾರದ ಆಸೆಯ ಮಾಯಾಜಾಲವನ್ನಷ್ಟೇ ತೋರಿಸಿ, ಅಧಿಕಾರವನ್ನು ಮರೀಚಿಕೆ ಮಾಡುತ್ತಿದೆ. ಪದೇಪದೆ ದೆಹಲಿಗೆ ಕರೆಸಿಕೊಂಡು, ಸುಖಾಸುಮ್ಮನೆ ಸಿಎಂ ಅವರನ್ನು ಕಾಯಿಸಿ, ಬೇಯಿಸಿ, ನೋಯಿಸಿ ಕೊನೆಗೊಮ್ಮೆ ದರ್ಶನ ನೀಡಿ, ಧನ್ಯೋಸ್ಮಿ ಮಾಡಿ ಕಳಿಸುತ್ತಿದೆ. ಆದರೆ, ಅವರೊಡನೆ ಸಚಿವರ ಪಟ್ಟಿಯಂತಹ ಯಾವುದೇ ಪೆಟ್ ಐಟಂ ಬರುತ್ತಿಲ್ಲ. ಪ್ರತಿ ಬಾರಿ ಹೋದಾಗಲೂ, ಮದುವೆ ಮುಂಜಿಗೆ ಹೋಗಿ ಹಾಗೆ ಒಂದ್ ರೌಂಡ್ ಹೈಕಮಾಂಡ್ ಆಫೀಸ್ ಕಡೆ ಹೋಗಿ ಬರೋ ರೂಢಿ ಇಟ್ಕೊಂಡಿರೋ ಬೊಮ್ಮಾಯಿ ಅವರು, ಇದನ್ನೇ ಮುಂದುವರಿಸಿದ್ದಾರೆ. ಇದು ಬಹುತೇಕ ಸಚಿವಾಕಾಂಕ್ಷಿಗಳಲ್ಲಿ ಗಗನವು ಎಲ್ಲೋ, ಭೂಮಿಯೂ ಎಲ್ಲೋ ಅನ್ನೋ ಭಾವನೆ ಮೂಡಿಸಿತ್ತು. ಕೆಲವರಂತೂ ಈಗಾಗಲೇ ತಮಗೆ ಬೇಕಾದ ಸೂಟು ಹೊಲೆಸಲು ಅಳತೆ ಕೊಟ್ಟಿದ್ದರು. ಆದರೆ, ಸಿಎಂ ಅವರ ಈ ತಿರುಗಾಟವ ಕಂಡ ನಂತರ ಕೋಟು ಬ್ಯಾಡ. ಏನೂ ಬೇಡ ಹೋಗಿ ನಮ್ ಕ್ಷೇತ್ರದಲ್ಲಿ ವಸಿ ಕೆಲ್ಸ ಮಾಡ್ಕಂಡು ಮುಂದಿನ್ ಎಲೆಕ್ಷನ್ ಗೆಲ್ಲೋದ್ ನೋಡ್ಕೋಳ್ಳೋಣ, ಇವರ ಸಚಿವ ಸ್ಥಾನ ನೆಚ್ಚಿಕೊಂಡು ಕುತ್ಕಂಡ್ರೆ, ನಾವು ಅದೇನಕ್ಕೋ ಮುದಿ ನಾಯಿ ಕಾದು ಕೂತಂತೆ ಆಗುತ್ತೆ ಅಂತ ಕೋಪಗೊಂಡಿದ್ದಾರಂತೆ. ಅದಕ್ಕಾಗಿ, ಈ ಆರೇಳು ತಿಂಗಳ ಅಧಿಕಾರ ಯಾವನಿಗ್ ಬೇಕು, ಊರಲ್ಲೋಗಿ ಭಂಗ ಮಾಡನಾ ಬಾಗುರು ಅಂತ ಹಿಂಬಾಲಕರನ್ನು ಕರೆದುಕೊಂಡು ಊರ್ ಕಡೆ ಬಸ್ ಹತ್ತಿದ್ದಾರಂತೆ. ಒಟ್ಟಾರೆ, ಬಿಜೆಪಿ ಸರಕಾರದ ಸಂಪುಟ ವಿಸ್ತರಣೆಯಂತೂ ಗಜಪ್ರಸವದಂತೆ ಇಡೀ ಜನರನ್ನು ಕಾಯಿಸುತ್ತಿದೆ. ಈಗ, ಆಗ ಅನ್ನೋ ಸೆನ್ಸೇಷನ್ ಕ್ರಿಯೇಟ್ ಮಾಡಿ, ಉಳಿದ ವಿಚಾರ ಮರೆ ಮಾಡೋ ಟ್ರಿಕ್ಸ್ ಇದು ಅನ್ನೋದು ಬುದ್ಧಿವಂತರ ಮಾತು. ಆದ್ರೆ ನಿಜ ಏನೋ ಯಾರಿಗೂ ಗೊತ್ತಾಗ್ತಿಲ್ಲ. ಮುಂದೆ ಕಾದು ನೋಡ್ಬೇಕು.

ಸಂಪಾದಕರ ಸದ್ಯಶೋಧನೆ

ಗೊಂದಲ ಹುಟ್ಟಿಸುವ ತಲೆಬರಹಗಳು

ಸುದ್ದಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಶೀರ್ಷಿಕೆಯೊಂದನ್ನೇ ಓದಬಾರದು. ಶೀರ್ಷಿಕೆ ಎಂದೂ ಸುದ್ದಿಯನ್ನು ಇಡಿಯಾಗಿ ಹೇಳುವುದಿಲ್ಲ. ಅದು ಸಾಧ್ಯವೂ ಇಲ್ಲ. ಅದು ಹೆಡ್ ಲೈನ್ ಉದ್ದೇಶವೂ ಅಲ್ಲ. ಹೆಡ್ ಲೈನ್ ಸುದ್ದಿಯನ್ನು ಇಡಿಯಾಗಿ ಹೇಳಲೂಬಾರದು. ಕಾರಣ ಇಡಿಯಾಗಿ ಹೇಳಿದರೆ ಸುದ್ದಿಯನ್ನು ಯಾರು ಓದುತ್ತಾರೆ? ಆದರೆ ಅನೇಕರು ಶೀರ್ಷಿಕೆಯೊಂದನ್ನೇ ಓದಿ ಮುಂದೆ ಸಾಗುತ್ತಾರೆ. ಅಂಥವರಿಗೆ ಸುದ್ದಿ ಸರಿಯಾಗಿ ಅರ್ಥವಾಗಲು ಸಾಧ್ಯವಿಲ್ಲ. ಎಷ್ಟೋ ಸಲ ಶೀರ್ಷಿಕೆಯನ್ನು ಓದುವಾಗ, ಅವು ಅಸ್ಪಷ್ಟವಾಗಿರುವುದು, ಗೊಂದಲಮಯವಾಗಿರುವುದು ಕಂಡು ಬರುತ್ತದೆ. ಅಂಥವರಿಗೆ ಸುದ್ದಿ ಸರಿಯಾಗಿ ಅರ್ಥವಾಗಿರುವುದಿಲ್ಲ ಅಥವಾ ಅರ್ಥ ಮಾಡಿಕೊಂಡಿದ್ದನ್ನು ಶೀರ್ಷಿಕೆಯಲ್ಲಿ ಸಂಕ್ಷಿಪ್ತವಾಗಿ ಬರೆಯಲು ಬಂದಿರಲಿಕ್ಕಿಲ್ಲ ಅಥವಾ ಅರ್ಥ ಮಾಡಿಕೊಂಡಿದ್ದರೂ ಬರೆಯುವಾಗ ಗೊಂದಲವಾಗಿದ್ದು ತಿಳಿಯದೇ ಹೋಗಬಹುದು. ಅಂಥವರು ತಮ್ಮ ಗೊಂದಲವನ್ನು ಓದುಗರಿಗೆ ವರ್ಗಾಯಿಸಿರುತ್ತಾರೆ. ನಮ್ಮ ಪತ್ರಿಕೆಯ ಅಂಕಣಕಾರರಾಗಿರುವ ಶ್ರೀವತ್ಸ ಜೋಶಿಯವರು ಅಮೆರಿಕದಲ್ಲಿ ಕುಳಿತು 'ಸ್ವಚ್ಛ ಭಾಷೆ ಅಭಿಯಾನ' ಮಾಡುತ್ತಿದ್ದು, ಅದರ ಭಾಗವಾಗಿ, ಅವರು ಪತ್ರಿಕೆಗಳಲ್ಲಿ ಪ್ರಕಟವಾಗುವ ಶೀರ್ಷಿಕೆಗಳಲ್ಲಿನ ಹಲವು ಗೊಂದಲಕಾರಿ ಶೀರ್ಷಿಕೆಗಳನ್ನು ಪಟ್ಟಿ ಮಾಡಿದ್ದು ನೆನಪಾಗುತ್ತದೆ. ''100% ಸೀಟು ಭರ್ತಿ: ಫಿಲಂ ಚೇಂಬರಿಂದ ಅಶೋಕ್ ಮೊರೆ'' ಎಂಬ ಶೀರ್ಷಿಕೆಯನ್ನು ಗಮನಿಸಿ. ಮೊರೆ ಹೊಕ್ಕಿದ್ದು ಅಶೋಕ್ ಅಲ್ಲ, ಫಿಲಂ ಚೇಂಬರಿನವರು. ಈ ತಲೆಬರಹವನ್ನು ನೋಡಿದರೆ ಮೊರೆ ಹೊಕ್ಕಿದ್ದೇ ಅಶೋಕ್ ಇರಬೇಕು, ಆದರೆ ಅವರು ಯಾರ ಮೊರೆ ಹೊಕ್ಕರು ಎಂದು ಪ್ರಶ್ನೆ ಮೂಡುವಂತಿದೆ. ಇನ್ನೊಂದು ಶೀರ್ಷಿಕೆ ಗಮನಿಸಿ. ''ಕೊಡಗಿನಲ್ಲಿ 17ರಿಂದ 9ರಿಂದ ಪ.ಪೂ. ಕಾಲೇಜು ಆರಂಭ'' ಹಾಗಾದರೆ ಪ.ಪೂ ಕಾಲೇಜು 17ರಿಂದ ಆರಂಭವೋ, 9ರಿಂದ ಆರಂಭವೋ? ಅಥವಾ 17ನೆಯ ತಾರೀಕಿನಂದು ಬೆಳಗ್ಗೆ 9 ಗಂಟೆಗೆ ಆರಂಭವೋ? ಇದ್ಯಾವುದೂ ಅಲ್ಲ. 9ನೆಯ ತರಗತಿಯಿಂದ ಪದವಿಪೂರ್ವ ಕಾಲೇಜುವರೆಗಿನ ತರಗತಿಗಳು ದಿನಾಂಕ 17ರಿಂದ ಆರಂಭ ಎಂಬ ಸುದ್ದಿಯನ್ನು ಪತ್ರಿಕೆಯ ಓದುಗರಿಗೆ ತಿಳಿಸುತ್ತಿರುವ ರೀತಿ ಇದು! ಹಾಗೆ ಮತ್ತೊಂದು ಶೀರ್ಷಿಕೆಯನ್ನು ಗಮನಿಸಿ. ''ಗ್ರಾಮಸಭೆ ಮುಂಭಾಗವೇ ಕುಸಿದುಬಿದ್ದ ಮಹಿಳೆ'' 'ಗ್ರಾಮಸಭೆಯ ಮುಂಭಾಗವೇ' ಎಂದು ಒಂದು ಸಾಲಿನಲ್ಲಿ, ಕುಸಿದುಬಿದ್ದ ಮಹಿಳೆ ಎಂದು ಇನ್ನೊಂದು ಸಾಲಿನಲ್ಲಿ ಇರುವುದರಿಂದ ಇದು ಮತ್ತಷ್ಟು ಆಭಾಸಕಾರಿ ಆಗಿದೆ. ಗ್ರಾಮಸಭೆಯ ಮುಂಭಾಗವೇ ಕುಸಿದುಬಿತ್ತೇನೋ ಎನ್ನುವಂತೆ. ಅದಕ್ಕಿಂತ, 'ಗ್ರಾಮಸಭೆಯ ಎದುರೇ ಕುಸಿದುಬಿದ್ದ ಮಹಿಳೆ' ಎಂದು ಬರೆದಿರುತ್ತಿದ್ದರೆ ಒಂದು ಅಕ್ಷರ ಉಳಿತಾಯವೂ ಆಗುತ್ತಿತ್ತು. ಇನ್ನೊಂದು ಹೆಡ್ ಲೈನ್. ''ಯಾಗ ಮಾಡಿ ಹರಸಿದ ಐವರು ಋತ್ವಿಜರಿಗೆ ಮೋದಿ ದಕ್ಷಿಣೆ''. ಮೋದಿಯವರನ್ನೇ ದಕ್ಷಿಣೆಯಾಗಿ ಪಡೆದ ಋತ್ವಿಜರು ಭಲೇ ಅದೃಷ್ಟವಂತರು ಎನ್ನೋಣವೇ? ಅಥವಾ, ಮೋದಿಯವರು ಋತ್ವಿಜರಿಗೆ ದಕ್ಷಿಣೆ ನೀಡಿದರು ಎಂದು ಅರ್ಥೈಸಿಕೊಳ್ಳೋಣವೇ? ''₹ 1.43 ಮೌಲ್ಯದ ಅಕ್ರಮ ಮರಳು ವಶ''. ಕೇವಲ ಒಂದು ರುಪಾಯಿ ನಲ್ವತ್ತಮೂರು ಪೈಸೆ ಮೌಲ್ಯದ ಮರಳನ್ನು ವಶಪಡಿಸಿಕೊಂಡು ಪೊಲೀಸರು ಏನು ಮಾಡಿರಬಹುದು? ಅವರ ಆ ಸಾಹಸಕ್ಕೆ ಸಿಕ್ಕಿದ್ದು ಜುಜುಬಿ ರೂ.1.43 ಮೌಲ್ಯದ ಮರಳು? ಇದು ತಲೆಬರಹದಲ್ಲಷ್ಟೇ ಆದ ದೋಷವಲ್ಲ. ಸುದ್ದಿ ವಿವರದಲ್ಲಿ ₹ 1.43 ಬೆಲೆ ಬಾಳುವ ಒಟ್ಟು 205 ಮೆಟ್ರಿಕ್ ಮರಳು ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದನ್ನು ಪತ್ತೆ ಹಚ್ಚಿ ವಶಪಡಿಸಿಕೊಂಡಿದ್ದಾರೆ. ಅಂದ ಹಾಗೆ, ಮೆಟ್ರಿಕ್ ಮರಳು ಎಂದರೇನು? ಮೆಟ್ರಿಕ್ ಟನ್ ಮರಳು ಇರಬಹುದೇ? ಕೆಲವು ಸಲ ಶೀರ್ಷಿಕೆಗಳನ್ನು ಅರ್ಥ ಮಾಡಿಕೊಳ್ಳುವುದು ಓದುಗರಿಗೆ ಸವಾಲೇ.

ಹನುಮನ ಭಜನೆ ದೇಶವಿರೋಧಿಯೇ?

ಬಾಳ ಠಾಕ್ರೆಯವರು ಜೀವನ ಪರ್ಯಂತ ಹಿಂದೂ ಧರ್ಮದ ರಕ್ಷಣೆಗಾಗಿ ಹಗಲು ರಾತ್ರಿಯೆನ್ನದೆ ದುಡಿದಿದ್ದರು, ಆದರೆ ಅವರ ಮಗ ಹಿಂದೂ ಧರ್ಮದ ಸಣ್ಣದೊಂದು ಕುರುಹನ್ನು ಉಳಿಸುವಂತೆ ಕಾಣಿಸುತ್ತಿಲ್ಲ.

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ಹನುಮಾನ್ ಚಾಲೀಸ್ ಪಠಣೆ ಮಾಡುವುದು ದೇಶ ವಿರೋಧಿ ಕೆಲಸವೇ? ಹೌದೆಂದು ಮಹಾರಾಷ್ಟ್ರದ ಶಿವಸೇನಾ ಹಾಗೂ ಕಾಂಗ್ರೆಸ್ ನೇತೃತ್ವದ ಸರಕಾರ ಮುಂಬೈನ ನವನೀತ್ ರಾಣಾ ಹಾಗೂ ರವಿ ರಾಣಾರನ್ನು ಬಂಧಿಸಿದೆ. ಸರಕಾರದ ಆದೇಶಗಳಿಗೆ ಕಿಮ್ಮತ್ತು ನೀಡದೆ ಮುಂಜಾನೆ ಜೋರಾಗಿ ಆಜಾನ್ ಕೂಗಿದವರ ವಿರುದ್ಧ ದಾಖಲಾಗದ ಮೊಕದ್ದಮೆ ಹನುಮಾನ್ ಚಾಲೀಸ್ ಪಠಣೆ ಮಾಡಿದವರ ವಿರುದ್ಧ ದಾಖಲಾಗಿದೆ. ಹುಲಿಯ ಹೊಟ್ಟೆಯಲ್ಲಿ ಇಲಿಯೊಂದು ಜನ್ಮತಳೆದಂತೆ ಬಾಳ ಠಾಕ್ರೆಯವರ ಕುಟುಂಬದಲ್ಲಿ ಉದ್ಧವ್ ಠಾಕ್ರೆ ಹುಟ್ಟಿದ್ದಾರೆ. ಬಾಳ ಠಾಕ್ರೆಯವರು ಜೀವನ ಪರ್ಯಂತ ಹಿಂದೂ ಧರ್ಮದ ರಕ್ಷಣೆಗಾಗಿ ಹಗಲು ರಾತ್ರಿಯೆನ್ನದೆ ದುಡಿದಿದ್ದರು, ಆದರೆ ಅವರ ಮಗ ಹಿಂದೂ ಧರ್ಮದ ಸಣ್ಣದೊಂದು ಕುರುಹನ್ನು ಉಳಿಸುವಂತೆ ಕಾಣಿಸುತ್ತಿಲ್ಲ. ತನ್ನ ಮನೆಯ ಮುಂದೆ ಹನುಮಾನ್ ಚಾಲೀಸ್ ಪಠಣೆ ಮಾಡಿದರೆ ಮುಖ್ಯಮಂತ್ರಿಗಳ ಭದ್ರತೆಗೆ ಲೋಪ ಬರುತ್ತದೆಂದು ದೇಶವಿರೋಧಿ ಆರೋಪದಡಿಯಲ್ಲಿ ನವನೀತ್ ರಾಣಾ ಹಾಗೂ ರವಿ ರಾಣಾರನ್ನು ಬಂಧಿಸಲಾಗಿದೆ. ಹನುಮಾನ್ ಚಾಲೀಸ್ ಪಠಣ ವಿಷಯದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಭದ್ರತೆಯಲ್ಲಿ ದೊಡ್ಡ ಲೋಪ ಕಂಡು ಬಂದಿತಂತೆ. ಹಾಗಾಗಿ ಅವರನ್ನು ಐ.ಪಿ.ಸಿ ಕಾಯ್ದೆಯ ನಿಬಂಧನೆ 124ಎ ಅಡಿಯಲ್ಲಿ ದೇಶವಿರೋಧಿ ಚಟುವಟಿಕೆಯ ಆಪಾದನೆಯ ಮೇರೆಗೆ ಬಂಧಿಸಲಾಗಿದೆ. ಈ ನಿಬಂಧನೆ ಬ್ರಿಟಿಷರ ಕಾಲದ್ದು, ಮೊದಮೊದಲು ಈ ನಿಬಂಧನೆ ಐ.ಪಿ.ಸಿ. ಕಾಯ್ದೆಯಲ್ಲಿರಲಿಲ್ಲ. ಬ್ರಿಟಿಷರ ವಿರುದ್ಧ ಯಾವಾಗ ಸ್ವಾತಂತ್ರ್ಯ ಹೋರಾಟಗಾರರ ಧ್ವನಿ ಹೆಚ್ಚಾಯಿತೋ, ಅದನ್ನಡಗಿಸಲು ಈ ನಿಬಂಧನೆಯನ್ನು ಸೇರಿಸಲಾಯಿತು.

1891ರಲ್ಲಿ ಮೊದಲ ಬಾರಿಗೆ ಈ ಕಾಯ್ದೆಯಡಿಯಲ್ಲಿ ಪತ್ರಿಕಾ ಸಿಬ್ಬಂದಿಯನ್ನು ಬ್ರಿಟಿಷ್ ಸರಕಾರವು ತಂದಿದ್ದ ಕಾನೂನಿನ ವಿರುದ್ಧ ಧ್ವನಿ ಎತ್ತಿದ್ದಾರೆಂಬ ವಿಷಯವಾಗಿ ಬಂಧಿಸಲಾಯಿತು. ನಂತರ ಇದೇ ನಿಬಂಧನೆಯಡಿಯಲ್ಲಿ ಗಾಂಧಿಯವರನ್ನು 6 ವರ್ಷಗಳ ಕಾಲ ಬ್ರಿಟಿಷ್ ಸರಕಾರದ ವಿರುದ್ಧ ಮಾತನಾಡಿದ್ದಕ್ಕಾಗಿ ಜೈಲಿಗೆ ಕಳುಹಿಸಲಾಯಿತು. ಸರ್ದಾರ ವಲ್ಲಭಾಯಿ ಪಟೇಲ್ ವಿರುದ್ಧ ದಾವೆ ಹೂಡಲಾಯಿತು. ಭಗತ್ ಸಿಂಗ್ ವಿರುದ್ಧ ಕ್ರಮ ಕೈಗೊಳ್ಳಲಾಯಿತು. ಸ್ವತಂತ್ರ್ಯಾ ನಂತರ ಈ ಕಾಯ್ದೆಯು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ, ಅದಕ್ಕಾಗಿ ತೆಗೆದು ಹಾಕಬೇಕೆಂಬ ಚರ್ಚೆಗಳು ಆರಂಭವಾದವು. 1947 ರಿಂದ 2022ರ 75 ವರ್ಷಗಳ ಅವಧಿಯಲ್ಲಿ ಸುಮಾರು 55 ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷ ಈ ನಿಬಂಧನೆಯನ್ನು ತೆಗೆದು ಹಾಕುವ ಒಂದು ಸಣ್ಣ ಪ್ರಯತ್ನವನ್ನೂ ಮಾಡಲಿಲ್ಲ. ಬದಲಾಗಿ ಈ ನಿಬಂಧನೆಯನ್ನು ಮತ್ತಷ್ಟು ಕಠಿಣಗೊಳಿಸಿದ್ದು ಸರ್ವಾಧಿಕಾರಿ ಇಂದಿರಾ ಗಾಂಧಿ. 1972ರಲ್ಲಿ ಈ ನಿಬಂಧನೆಗೆ ತಿದ್ದುಪಡಿ ಮಾಡಿ ಜಾಮೀನು ರಹಿತ ಅಪರಾಧವೆಂಬ ಕಾನೂನು ಜಾರಿಗೆ ತಂದರು. ಈ ತಿದ್ದುಪಡಿಯಾದ ಕೆಲವೇ ವರ್ಷಗಳಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ ಇಂದಿರಾ ಗಾಂಧಿ ಯಾವ ರೀತಿಯಲ್ಲಿ ಕಾನೂನನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡರೆಂಬುದನ್ನು ಮತ್ತೊಮ್ಮೆ ಹೇಳಬೇಕಿಲ್ಲ. ಕಾಂಗ್ರೆಸ್ ಅವಧಿಯಲ್ಲಿ ತನ್ನ ಸರಕಾರದ ವಿರುದ್ಧ ಮಾತನಾಡಿದ ಹಲವರನ್ನು ಈ ನಿಬಂಧನೆಯಡಿಯಲ್ಲಿ ಬಂಧಿಸಲಾಯಿತು. ನೆಹರು ಕಾಲದಲ್ಲಿ ಅವರ ಸರಕಾರದ ವಿರುದ್ಧ ಧ್ವನಿ ಎತ್ತಿದ ಜನಸಂಘದ ಕಾರ್ಯಕರ್ತರ ವಿರುದ್ಧ ಈ ನಿಬಂಧನೆಯನ್ನು ಜಾರಿ ಮಾಡಿ ಬಂಧಿಸಲಾಗಿತ್ತು. ಈ ನಿಬಂಧನೆಯಡಿಯಲ್ಲಿ ಜೀವಾವಧಿ ಶಿಕ್ಷೆಯನ್ನು ನೀಡಬಹುದಾಗಿದೆ. ಸ್ವಾತಂತ್ರ್ಯಾ ನಂತರ ಕಮ್ಯುನಿಸ್ಟರು ಭಾರತದ ವಿರುದ್ಧ ಹಲವು ಸಂಚುಗಳನ್ನು ಮಾಡಿದ್ದರು. ಕೆಲವು ಕಮ್ಯುನಿಸ್ಟ್ ನಾಯಕರು ದೇಶದ್ರೋಹದ ಹೇಳಿಕೆಗಳನ್ನು ನೀಡುತ್ತಲಿದ್ದರೂ ಅವರ ವಿರುದ್ಧ ಕಾಂಗ್ರೆಸ್ ಪಕ್ಷ ಈ ನಿಬಂಧನೆಯಡಿಯಲ್ಲಿ ಕ್ರಮ ಕೈಗೊಂಡಿದ್ದು ವಿರಳ. ಹನುಮಾನ್ ಚಾಲೀಸ್ ಪಠಣ ವಿಷಯದಲ್ಲಿ ಮಹಾರಾಷ್ಟ್ರ ಸರಕಾರದ ಸಾರ್ವಭೌಮತ್ವಕ್ಕೆ ಧಕ್ಕೆ ಬರುತ್ತದೆಯೆಂದು ರಾಣಾ ದಂಪತಿಗಳನ್ನು ಬಂಧಿಸಲಾಗಿದೆ.

2016 ರಲ್ಲಿ 'JNU' ವಿಶ್ವವಿದ್ಯಾಲಯದಲ್ಲಿ ಪಾರ್ಲಿಮೆಂಟ್ ದಾಳಿಯ ರೂವಾರಿಯಾಗಿದ್ದ ಅಫ್ಜಲ್ ಗುರುವನ್ನು ನೇಣಿಗೆ ಹಾಕಿದ್ದರ ವಿರುದ್ಧ ಪ್ರತಿಭಟನೆಯೊಂದು ನಡೆಯಿತು. ಈ ಪ್ರತಿಭಟನೆಯಲ್ಲಿ ಅಫ್ಜಲ್ ಗುರುವಿನ ಪರವಾಗಿ ಮಾತನಾಡಿದ ಕನ್ನಯ್ಯ ಕುಮಾರ್ ವಿರುದ್ಧ ಈ ಕಾಯ್ದೆಯಡಿಯಲ್ಲಿ ಕೇಸು ದಾಖಲಾಯಿತು. ಆತನನ್ನು ಬಂಧಿಸಿದ ಕೂಡಲೇ ಕಾಂಗ್ರೆಸ್ಸಿನ ಮಾಜಿ ಸಚಿವ ಪಿ.ಚಿದಂಬರಂ ಕನ್ನಯ್ಯ ಕುಮಾರ್ ಬಂಧನ ಮೂಲಭೂತ ಹಕ್ಕುಗಳ ಉಲ್ಲಂಘನೆಯೆಂದು ಹೇಳಿದರು. ಚಿದಂಬರಂ ಹೇಳಿಕೆಯಿಂದ ಕಾಂಗ್ರೆಸ್ಸಿನ ಇಬ್ಬಗೆಯ ನೀತಿ ಬಯಲಾಯಿತು. ನೆಹರು ಹಾಗೂ ಇಂದಿರಾ ಗಾಂಧಿ ಮಾಡಿದ ಕೆಲಸವನ್ನೇ ಚಿದಂಬರಂ ಹಾಗೂ ಸೋನಿಯಾ ಗಾಂಧಿ ಮುಂದುವರೆಸಿಕೊಂಡು ಬಂದರು. ಕಮ್ಯುನಿಸ್ಟ್ ಪತ್ರಕರ್ತೆ ಅರುಂಧತಿ ರಾಯ್ ಸದಾ ಭಾರತ ವಿರುದ್ಧದ ಹೇಳಿಕೆಗಳನ್ನು ನೀಡುತ್ತಲೇ ಬಂದಿದ್ದಾರೆ. JNU ವಿಶ್ವವಿದ್ಯಾಲಯದಲ್ಲಿ ಭಾರತ ವಿರೋಧಿ ಪ್ರತಿಭಟನೆಯ ಮುಂದಿನ ಸಾಲಿನಲ್ಲಿ ಈಕೆಯ ವಾಸ್ತವ್ಯ ವಿರುತ್ತದೆ. ತನ್ನ